**ದಿನಾಂಕಃ 07.02.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟಿ ಸವಾಲುಃ ವಾದಿ ಪರ ಶ್ರೀ ಎ.ಸಿ.ವೈ. ವಕೀಲರಿಂದಃ**

ವಾದಿಯು ದಾರಿ ಸಂಬಂಧ ಈ ದಾವೆಯನ್ನು ದಾಖಲಿಸಿರುತ್ತಾರೆ. ನನಗೆ ಶಿಗ್ಗಾ ಗ್ರಾಮ ಸ.ನಂ.102 ರಲ್ಲಿ ಎರಡುವರೆ ಎಕರೆ ಜಮೀನು ಮಂಜೂರು ಆಗಿರುತ್ತದೆ. ಮಂಜೂರಾಗುವ ಪೂರ್ವದಲ್ಲಿ ಒಂದು ನಕ್ಷೆಯನ್ನು ತಯಾರಿಸಿರುತ್ತಾರೆ ಅಂದರೆ ಸರಿ. ನಕ್ಷೆ ತಯಾರಿಸುವ ಸಂದರ್ಭದಲ್ಲಿ ನಾನು ಹಾಜರಿದ್ದೆ. ಶಿಗ್ಗಾ ಗ್ರಾಮ ಸ.ನಂ.102 ರಲ್ಲಿ ಸರ್ವೆ ನಕ್ಷೆ ತಯಾರಿಸುವಾಗ ಮಂಜೂರಾದ ಎಲ್ಲರೂ ಹಾಜರಿದ್ದರು ಅಂದರೆ ಸರಿ. ನಿಪಿ–6 ರಲ್ಲಿರುವ ಬ್ಲಾಕ್ ನಂ.4 ನನಗೆ ಮಂಜೂರಾದ ಜಮೀನಾಗಿರುತ್ತದೆ. ಸದರಿ ಬ್ಲಾಕ್ ನಂ.4 ರಲ್ಲಿ ಒಂದು ರಸ್ತೆಯನ್ನು ಕಾಣಿಸಿರುತ್ತಾರೆ ಅಂದರೆ ಸರಿ. ಸದರಿ ರಸ್ತೆಯು ಉತ್ತರದಿಂದ ದಕ್ಷಿಣಕ್ಕೆ ಎಂದು ಕಾಣಿಸಿರುತ್ತಾರೆ ಅಂದರೆ ಸರಿ. ಸದರಿ ರಸ್ತೆಯು ನನ್ನ ಜಮೀನಿಗೆ ತಾಗಿಕೊಂಡು ಮುಂದೆ ಪೂರ್ವ ಭಾಗಕ್ಕೆ ತೋರಿಸಿರುತ್ತಾರೆ ಅಂದರೆ ಸರಿ. ನಂತರ ಸದರಿ ರಸ್ತೆಯು ಪೂರ್ವ ಭಾಗಕ್ಕೆ ನನ್ನ ಜಮೀನಿಗೆ ತಾಗಿಕೊಂಡು ಸ.ನಂ.101 ಕ್ಕೆ ತಾಗಿಕೊಂಡಿದೆ ಎಂದು ತೋರಿಸಿರುತ್ತಾರೆ ಅಂದರೆ ಸರಿ. ಸದರಿ ರಸ್ತೆಯು ಕುಂದಗಸವಿ ಗ್ರಾಮದ ರಸ್ತೆಯಿಂದ ಎಲ್ಲರ ಜಮೀನಿಗೆ ಹೋಗುವ ರಸ್ತೆ ಎಂದು ಕಾಣಿಸಿರುತ್ತಾರೆ ಅಂದರೆ ಸರಿ. ಸದರಿ ನಿಪಿ–6 ನಕ್ಷೆಯ ಪ್ರಕಾರ ಬ್ಲಾಕ್ ನಂ.3 ರಲ್ಲಿ ಯಾವುದೇ ರಸ್ತೆ ಇಲ್ಲ ಅಂದರೆ ಸರಿ. ಅದೇ ರೀತಿ ಬ್ಲಾಕ್ ನಂ.1 ಮತ್ತು 2 ರಲ್ಲಿ ಯಾವುದೇ ರಸ್ತೆಯನ್ನು ಕಾಣಿಸಿರುವುದಿಲ್ಲ

ಅಂದರೆ ಸರಿ. ನಮ್ಮ ಎಲ್ಲಾ ಜಮೀನುಗಳಿಗೆ ಹೋಗಲು ದಾರಿ ಎಂದು ಕಾಣಿಸಿ ನಿಪಿ–6 ನಕ್ಷೆಯನ್ನು ಸರ್ವೆ ಅಧಿಕಾರಿಗಳು ತಯಾರಿಸಿರುತ್ತಾರೆ ಅಂದರೆ ಸರಿ. ನಿಪಿ–6 ಸರ್ವೆ ನಕ್ಷೆಯನ್ನು ಅಂದಾಜು ಸುಮಾರು 5–6 ವರ್ಷಗಳ ಹಿಂದೆ ತಯಾರಿಸಿರುತ್ತಾರೆ. ಒಂದುವೇಳೆ ನಕ್ಷೆ ತಯಾರಿಸುವಾಗ ಬೇರೆ ರಸ್ತೆ ಇದ್ದರೆ ತೋರಿಸುತ್ತಿದ್ದರು ಅಂದರೆ ಸರಿ. ಗದ್ದೆ ಬಸಪ್ಪ ರವರಿಗೆ ವಾದಿ ಮತ್ತು ಹೊಳೆ ಬಸಪ್ಪ ಎಂದು ಎರಡು ಜನ ಮಕ್ಕಳು ಅಂದರೆ ಸರಿ. ಅವರು ತಲಾ ಎರಡು ಎಕರೆ ಅಂತೆ ಹಿಸ್ಸೆ ಮಾಡಿಕೊಂಡಿರುತ್ತಾರೆ ಅಂದರೆ ಸರಿ. ವಾದಿಯು ತಮ್ಮ ಹಿಸ್ಸೆಗೆ ಬಂದ ಜಮೀನಿನಲ್ಲಿ ಅಡಿಕೆ ತೋಟ ಮಾಡಿರುತ್ತಾರೆ ಅಂದರೆ ಸರಿ. ವಾದಿ ಮತ್ತು ಹೊಳೆ ಬಸಪ್ಪ ರವರ ಜಮೀನಿನ ಪೂರ್ವ ಭಾಗದಲ್ಲಿ ಶೇಖರಪ್ಪ ರವರ ಜಮೀನು ಇದೆ ಅಂದರೆ ಸರಿ. ಸದರಿ ಶೇಖರಪ್ಪ ರವರು ತಮ್ಮ ಜಮೀನಿನಲ್ಲಿ ನೀಲಗಿರಿ ಮರಗಳನ್ನು ಬೆಳೆಸಿರುತ್ತಾರೆ ಅಂದರೆ ಸರಿ. ಸದರಿ ಮರಗಳು ವಾದಿಯ ಜಮೀನಿನ ಪೂರ್ವ ಭಾಗದಲ್ಲಿವೆ ಅಂದರೆ ಸರಿ. ಶೇಖರಪ್ಪ ರವರ ಜಮೀನಿನ ನೀಲಗಿರಿ ಮರಗಳ ಪ್ಲಾಂಟೇಷನ್ ನಲ್ಲಿ ಯಾವುದೇ ರಸ್ತೆ ಇಲ್ಲ ಅಂದರೆ ಸರಿ. ಸಾಕ್ಷಿಯು ಮುಂದುವರೆದು ಓಡಾಡಲು ದಾರಿ ಇದೆ ಎಂದು ಉತ್ತರಿಸುತ್ತಾರೆ. ವಾದಿ ಮತ್ತು ಶೇಖರಪ್ಪ ರವರ ಜಮೀನಿನ ನಡುವೆ ಯಾವುದೇ ರಸ್ತೆ ಇಲ್ಲ ಅಂದರೆ ಸಾಕ್ಷಿಯು ದಾರಿ ಇದೆ ಎಂದು ಉತ್ತರಿಸುತ್ತಾರೆ. ಪ್ರತಿವಾದಿಯವರು ಹಾಗೂ ನಮಗೆ ಕರಜಿ ಬಂಗಾರಪ್ಪನ ಜಮೀನಿನ ಮೂಲಕ ನಮಗೆಲ್ಲರಿಗೂ ಮಂಜೂರಾತಿ ಮಾಡುವ ಪೂರ್ವದಲ್ಲಿ ದಾರಿಯನ್ನು ಕಾಣಿಸಿ ನಕ್ಷೆಯನ್ನು

ತಯಾರಿಸಿರುತ್ತಾರೆ ಅಂದರೆ ಸರಿ. ಇವಾಗಲೂ ಸಹ ಎಲ್ಲರೂ ಅದೇ ದಾರಿಯಿಂದ ಓಡಾಡುತ್ತಿದ್ದಾರೆ ಅಂದರೆ ಸರಿ. ನ್ಯಾಯಾಲಯದಲ್ಲಿ ಸಲ್ಲಿಸಿದ ಪ್ರಮಾಣ ಪತ್ರವನ್ನು ಪ್ರತಿವಾದಿಯವರು ಹೇಳಿ ಬರೆಯಿಸಿರುತ್ತಾರೆ. ವಾದಿಯ ಸ್ವತ್ತಿನಲ್ಲಿ ಯಾವುದೇ ದಾರಿ ಇರುವುದಿಲ್ಲ. ಯವಾಗಲೂ ಸಹ ನಾವು ಓಡಾಡಿರುವುದಿಲ್ಲ ಅಂದರೆ ಸರಿಯಲ್ಲ. ಪ್ರತಿವಾದಿಯವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಅಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

**(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ರೀತ್ಯಾ ಕಂಪ್ಯೂಟರೀಕರಿಸಲಾಯ್ತು).**

**ಓ.ಹೇ.ಕೇ. ಸರಿ ಇದೆ ಎಂದು ಒಪ್ಪಿದ್ದಾರೆ.**

**ಪ್ರಧಾನ ವ್ಯವಹಾರ ನ್ಯಾ ಮತ್ತು ಜೆ.ಎಂ.ಎಫ್.ಸಿ**
**ಸೊರಬ.**